ಹೊನ್ನಾವರದ ಕಾಸರಕೋಡು ಬೀಚಿನಲ್ಲಿ ಈ ವರ್ಷ ದಾಖಲೆ ಸಂಖ್ಯೆಯಲ್ಲಿ ‘ಆಲಿವ್ ರಿಡ್ಲೆ’ ಕಡಲಾಮೆಗಳು ಬಂದಿವೆ. ಆಳ ನಿಸರ್ಗದ ಅದೆಷ್ಟೊಂದು ರಹಸ್ಯಗಳನ್ನು ಒಡಲಲ್ಲಿಟ್ಟುಕೊಂಡು ಮೊದಲ ಪ್ರಸವಕ್ಕೆ ತವರಿಗೆ ಬಂದಂತಿರುವ ಅವುಗಳ ರಕ್ಷಣೆಗೆ ಮುಂದಾಗುವ ಸ್ಥಳೀಯ ‘ಟೊಂಕಾ’ ಮೀನುಗಾರರು, ಮಕ್ಕಳನ್ನು ಕಾಳಜಿ ಮಾಡುವ ಅಮ್ಮಂದಿರಂತೆ ಕಾಣಿಸುತ್ತಾರೆ. ಮೊಟ್ಟೆಗೂಡುಗಳಿಗೆ ರಕ್ಷಣಾ ಕೋಟೆ ಕಟ್ಟಿ, ಅಲ್ಲಿಂದ ಚಂದದ ಮರಿಗಳು ಹೊರಬೀಳುತ್ತಿರುವಾಗ ಅವೆಲ್ಲವನ್ನೂ ಸಮುದ್ರಕ್ಕೆ ಬಾಗಿನವಾಗಿ ಒಪ್ಪಿಸುವ ಸಂಭ್ರಮದ ಕಾರ್ಯ ತಾಯಿ–ಮಕ್ಕಳ ನಡುವಣ ಕಳ್ಳುಬಳ್ಳಿ ನಂಟನ್ನು ನೆನಪಿಸುವಂತಹದ್ದು. ಕಡಲಾಮೆಗಳ ರಕ್ಷಣೆಯಲ್ಲೇ ತಮ್ಮ ರಕ್ಷಣೆಗೂ ಕವಚ ಕಟ್ಟಿಕೊಳ್ಳುವ ತವಕ ಮೀನುಗಾರರದು. ಪ್ರಕೃತಿ ಮತ್ತು ಮನುಷ್ಯರ ಭಾಷೆ ಎರಡೂ ಒಂದೇ ಆಗುವ ಅಪರೂಪದ ವಿದ್ಯಮಾನ ಇದು. ಆಧುನಿಕ ಸಂದರ್ಭದ ‘ಕೂರ್ಮಾವತಾರ’ದ ಈ ಕಥನ ಪ್ರಕೃತಿ ಮತ್ತು ಮನುಷ್ಯರ ಸಹಬಾಳ್ವೆಯ ವಿಶಿಷ್ಟ ಮಾದರಿಯೊಂದನ್ನು ಮುಂದಿಡುತ್ತಿದೆ.



# ಕಡಲಾಮೆಗಳ ಕೌತುಕ ಲೋಕ